

# ಶ್ರೀ ವೇಂಕಟಾಚಲಧಾಮ





## ಶ್ರೀ ಶ್ರೀನಿವಾಸ ದೇವರು ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳವರ ಮೃತ್ತಿಕಾ ಬೃಂದಾವನ ಪ್ರತಿಷ್ಠಾಪನಾ ಮಹೋತ್ಸವ

23-05-2011

**ಸೋಮವಾರ**



## ಶ್ರೀ ಭಾಗವತಾಶ್ರಮ ಪ್ರತಿಷ್ಠಾನ



### ಭಂಡಾರಕೇರಿ ಮಠ

372 ಚಾಮರಾಜ ಜೋಡಿ ರಸ್ತೆ, ಮೈಸೂರು

ಆನಂದತೀರ್ಥವರದೇ ದಾನವಾರಣ್ಯಪಾವಕೇ
ಜ್ಞಾನದಾಯಿನಿಸರ್ವೇಶೇ ಶ್ರೀನಿವಾಸೇಸ್ತು ಮೇ ಮನಃ





ಸಕಲ ಸಜ್ಜನ ಸಂದೋಹವನ್ನು ತನ್ನ ಕೃಪಾಕಟಾಕ್ಷದಿಂದಲೇ ಅನುಗ್ರಹಿಸುವ ಉದ್ದೇಶದಿಂದ, ಅಮಂಗಲ ನಿವೃತ್ತಿ ದ್ವಾರಾ ಮಾಂಗಲ್ಯಪ್ರಾಪ್ತಿಗಾಗಿ ಸ್ವಕಲ್ಯಾಣೋತ್ಸವವನ್ನು ನೆರವೇರಿಸಿಕೊಂಡ, ಬ್ರಹ್ಮಾದಿ ಸುತರನ್ನು ಆನಂದ ತುಂದಿಲರನ್ನಾಗಿ ಮಾಡಲು, ಸ್ವಸ್ವಯೋಗ್ಯತಾನುಸಾರ ಸೇವೆಮಾಡಲು ಅವಕಾಶ ಕಲ್ಪಿಸಿದ, ಎಲ್ಲ ಭಕುತರಭೀಷ್ಮ ಕೊಡುವುದಕ್ಕೆ ತಾ ಕೈವಲ್ಯವನ್ನು ಬಿಟ್ಟು, ಅದಕ್ಕೆ ಭೃಗುಶಾಪವನ್ನೇ ನಿಮಿತ್ತವನ್ನಾಗಿ ಮಾಡಿಕೊಂಡು ವೇಂಕಟಾಚಲದ ಉಚ್ಚ ಶಿಖರದಲ್ಲಿ ನಿಂತು ದಿಕ್ಕು ದಿಕ್ಕುಗಳಲ್ಲಿ ಮೂಲೆಮೂಲೆಗಳಲ್ಲಿರುವ ತನ್ನ ಭಜಕ ಭಕ್ತವೃಂದವನ್ನು ನೋಡುತ್ತಿರುವ ಸರ್ವೋತ್ತಮ ಪರದೇವತೆ ಶ್ರೀನಿವಾಸನಿಂದು ಪ್ರತಿಷ್ಠಾವಿಧಿಯ ಪರ್ವಕಾಲದಲ್ಲಿ ಶ್ರೀ ವೇಂಕಟಾಚಲಧಾಮವನ್ನು ಸೇರುವನು.

"ತಿರಮಲೇಶನೆ ನಿನ್ನ ಪದ ಸಂದರುಶನವು ಇಲ್ಲದೆಲೆ ಇಂದಿಗೆ । ವರುಷ ಸಂಪೂರ್ತ್ಯಾಯ್ತು ಮನ ಎದ್ದುರಿದ್ದುರಿದು ನಿನಗೆರಗುತಿದೆ । ಮರಕರಿಸೋ । ಧಿಕ್ಕರಿಸೋ, ಆದರಿಸೋ ಹ್ಯಾಗಾದರೂ ಬರುವೆ । ನಿನ್ನಡಿಗೆ ನಾ ಬರುವೆ॥"ಎಂದು ಭಾಗವತರ ಮಾತನ್ನು ನಿತ್ಯದಲ್ಲಿಅನುಸಂಧಾನಕ್ಕೆ ತಂದುಕೊಂಡು ಚಡಪಡಿಸುತ್ತಿರುವ ಸೇವಕರಿಗಾಗಿ ಜಗದೊಡೆಯ ಬರುವ, ಮಾಧವನೆಂಬ ಭಕ್ತನ ಪಾಪಗಳನ್ನು ಪರಿಹರಿಸಿದ ಕಾರಣದಿಂದಲೂ ವೆಂಕಟ ಎಂದೆನಿಸಿದ ಶೈಲಸ್ವಾಮಿ, ಸರ್ವರ ಸರ್ವ ಪಾಪಗಳನ್ನು ಪರಿಹರಿಸುವ ಶ್ರೀ ವೇಂಕಟೇಶನಿಂದು ಆಗಮಿಸುವನು. ಜೊತೆಯಲ್ಲಿ ಅವನ ಅನುಗ್ರಹ ವಿಶೇಷದಿಂದಲೇ ಜನಿಸಿ ವೆಂಕಟನಾಥನೆಂದನಿಸಿ ಸಚ್ಛಾಸ್ತ್ರರೂಪವಾದ ಸ್ವಾಮಿಪುಷ್ಕರಿಣಿಯನ್ನು ಕೊಟ್ಟ ಶ್ರೀ ರಾಘವೇಂದ್ರ ಸ್ವಾಮಿಗಳವರು ಆಗಮಿಸುತ್ತಿದ್ದಾರೆ.

ಕರ್ಮಭೂಮಿಯಾದ ಭಾರತದ ವಿವಿಧ ಭಾಗದಲ್ಲಿ ಭಾಗವತದ ಮೂಲಕ ಭಾಗವತ ಧರ್ಮವನ್ನು ಪ್ರಸಾರಗೈಯ್ಯುವ ಸದುದ್ದೇಶದಿಂದ "ಭಾಗವತಾಶ್ರಮ"ವೆಂಬ ಸನ್ನಾಮಧೇಯದಿಂದ ಸಂಕಲ್ಪಿತ ಕಾರ್ಯಗಳನ್ನು ನಡೆಸಿಕೊಂಡು ಬರುವ "ಶ್ರೀ ಶ್ರೀ ಶ್ರೀ ಪರಮಹಂಸೇತ್ಯಾದಿ ಬಿರುದಾವಳಿಗಳೆಂಬ ಪ್ರಭಾವಳಿಯಿಂದ ಅಲಂಕೃತರಾದ ಶ್ರೀ ಮದ್ವೈಷ್ಣವ ಸತ್ಸಂಪ್ರಾಯದಾಯ ಪ್ರವರ್ತಕರಾದ ಶ್ರೀಮದಾನಂದತೀರ್ಥರ ಪರಂಪರೆಯಲ್ಲಿ ವಿರಾಜಮಾನರಾಗಿದ್ದ ಶ್ರೀ ಶ್ರೀ ಶ್ರೀ ಭಂಡಾರಕೇರಿ ಮಠದ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ ಶ್ರೀ ಶ್ರೀ ವಿದ್ಯೇಶತೀರ್ಥ ಶ್ರೀಪಾದರು ಮಹೀಶೂರರೆಂದೆನಿಸಿರುವ ಮೈಸೂರಿನಲ್ಲೂ ಶ್ರೀನಿವಾಸ ಭದ್ರಕಾರಕನಾಗಿ ಬಂದು ನಿಲ್ಲಬೇಕು ಎಂಬ ದೃಷ್ಟಿಯಿಂದ ವೇಂಕಟಾಚಲಧಾಮದ ನಿರ್ಮಾಣಗೈದಿದ್ದಾರೆ. ಈ ಪವಿತ್ರ ಕ್ಷೇತ್ರದಲ್ಲಿಶ್ರೀನಿವಾಸನಿಗೆ ಪ್ರೀತಿಯಾಗುವ ನಿಟ್ಟಿನಲ್ಲಿ ದ್ರವ್ಯಯಜ್ಞ, ಜ್ಞಾನಯಜ್ಞ, ಸ್ವಾಧ್ಯಾಯಯಜ್ಞಾದಿಗಳನ್ನು ನಡೆಸುವಂತೆ ಸಂಕಲ್ಪಿಸಿದ್ದಾರೆ.

ಈ ಮಹತ್ತರವಾದ ಉತ್ಸವದಲ್ಲಿ ತಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿ ತನುಮನಧನ ಸಹಾಯವನ್ನುಗೈದು, ರಥೋತ್ಸವದಲ್ಲಿ ಪಾಲ್ಗೊಂಡು ಕೃತಾರ್ಥರಾಗುವಂತೆ ಮಂತ್ರಾಲಯ ಪ್ರಭುಗಳ ಅಂತರ್ಯಾಮಿ ಪ್ರಾಣಸ್ಥ ವೆಂಕಟೇಶನ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷೆ.

ಈ ದೃಷ್ಟಿಯಿಂದ "ಬ್ರಹ್ಮರಥ ಎಳೆಯುವ ಹಗ್ಗವನ್ನು ಸಾವಿರಾರು ಮಂದಿ ಮುಟ್ಟಿದರೂ, ಹಿಡಿದರೂ, ಎಳೆದರೂ, ನೋಡಿದರೂ, ಪುಣ್ಯಭಾಗಿಗಳಾಗುವಂತೆ" ಇಲ್ಲಿಯೂ ಎಲ್ಲರೂ ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸಿದ್ದಾರೆ.

**18-5-2011**ರಿಂದ ಆರಂಭಗೊಂಡು **24-5-2011**ರ ತನಕ ನಡೆಯಬಹುದಾದ ಈ ಧಾರ್ಮಿಕ ಪ್ರತಿಷ್ಠಾ ವಿಧಿವಿಧಾನದ ಕೈಂಕರ್ಯದಲ್ಲಿ ಧನರೂಪದಲ್ಲಿಯೋ ದ್ರವ್ಯರೂಪದಲ್ಲಿಯೋ ಭಗವದ್ಭಕ್ತರೆಲ್ಲರೂ ಕೈಜೋಡಿಸಿ ಶ್ರೀನಿವಾಸನ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

# ಸೇವಾ ವಿವರ

| | | |
|---|---|---|
| 1. | ಪ್ರತಿಷ್ಠಾಪನಾ ಪೂರ್ಣಸೇವೆ | 1,00,000-00 |
| 2. | ಪ್ರತಿಷ್ಠಾಪನಾ ಸೇವೆ (23-05-2011) | 50,000-00 |
| 3. | ಬ್ರಹ್ಮಕಲಶಾಭಿಷೇಕ | 25,000-00 |
| 4. | ಅನ್ನದಾನ ಸೇವೆ | 15,000-00 |
| 5. | ವಿಷ್ಣುಗಾಯತ್ರಿಮಂತ್ರ ಹೋಮ | 10,000-00 |
| 6. | ವೇದ ಪಾರಾಯಣ | 6,000-00 |
| 7. | ಭಾಗವತ ಮೂಲಪಾರಾಯಣ | 12,000-00 |
| 8. | ನಾರಾಯಣ ಅಷ್ಟಾಕ್ಷರ ಮಹಾಮಂತ್ರಹೋಮ | 10,000-00 |
| 9. | ತತ್ವ ಮಂತ್ರಹೋಮ | 7,000-00 |
| 10. | ಪವಮಾನ ಹೋಮ | 5,000-00 |
| 11. | ಕೃಷ್ಣಮಂತ್ರ ಹೋಮ | 3,000-00 |
| 12. | ಚಕ್ರಾಬ್ಜಮಂಡಲಪೂಜೆ (ಸರ್ವದೋಷಹರ) | 2,000-00 |
| 13. | ಮಹಾಕಲಶಾಭಿಷೇಕ | 1,000-00 |
| 14. | ಕಲಶಾಭಿಷೇಕ | 300-00 |
| 15. | ರಂಗಪೂಜೆ (23-05-2011) | 250-00 |

**ಹೆಚ್ಚಿನ ವಿವರಗಳಿಗೆ ಕೆಳಕಂಡವರಲ್ಲಿ ವಿಚಾರಣೆ ಮಾಡುವುದು**

| | |
|---|---|
| ವಿದ್ವಾನ್ ಕೆ. ಕೃಷ್ಣಕುಮಾರಾಚಾರ್ಯ | 96110 75040 |
| ಎಸ್. ಎಸ್. ರವಿ | 99162 81972 |
| ಮಧುಸೂದನ ಪದಕಿ | 0821 2331570 |
| ಎಂ. ಕೆ. ಪುರಾಣಿಕ್ | 93421 83124 |
| ವಿದ್ವಾನ್ ನಾಗೇಂದ್ರಆಚಾರ್ಯ | 94498 52515 |
| ಸುಧೀಂದ್ರ ಬೆಂಗಳೂರು | 99726 66114 |
| ಭಾಗವತಾಶ್ರಮ ಪ್ರತಿಷ್ಠಾನ ಮೈಸೂರು | 0821 2420808 |
| ಭಾಗವತಾಶ್ರಮ ಪ್ರತಿಷ್ಠಾನ ಬೆಂಗಳೂರು | 080-26721527 |
| ವೆಂಕಟರಾವ್ | 0821-2343118 |
| ಪ್ರಹ್ಲಾದರಾವ್ | 98001 44722 |
| ವೆಂಕಟೇಶರಾವ್ | 0820-2460333 |

Vani Press, Mysore. Ph. 2330295

|| ಪಿಬತ ಭಾಗವತಂ ರಸಮಾಲಯಂ ||

# ಶ್ರೀ ವೇಂಕಟಾಚಲ ಧಾಮದ ಉದ್ಘಾಟನಾ
## ಹಾಗೂ
# ಶ್ರೀ ಶ್ರೀನಿವಾಸ ದೇವರು
# ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳವರ
# ಮೃತ್ತಿಕಾ ಬೃಂದಾವನ ಪ್ರತಿಷ್ಠಾಪನಾ
# ಮಹೋತ್ಸವದ ಕರೆಯೋಲೆ

**ದಿನಾಂಕ : 23-05-2011**



ಶ್ರೀಮತಿ /ಶ್ರೀ ______________________________

______________________________

______________________________


ಶ್ರೀ ವೇಂಕಟಾಚಲಧಾಮ

ಶ್ರೀ ಸತ್ಯತೀರ್ಥ ಸಂಸ್ಥಾನ ಶ್ರೀ ಭಂಡಾರಕೇರಿ ಮಠ

372, ಚಾಮರಾಜ ಜೋಡಿರಸ್ತೆ, ಮೈಸೂರು ದೂರವಾಣಿ : 0821- 2420808

ಮಹನೀಯರೇ,

ಸ್ವಸ್ತಿ ಶ್ರೀ ಖರ ನಾಮ ಸಂವತ್ಸರದ ವೈಶಾಖ ಬಹುಳ ಷಷ್ಠೀ ಸೋಮವಾರ ದಿನಾಂಕ 23-05-2011ರಂದು ಮಧ್ಯಾಹ್ನ 11-55 ಕ್ಕೆ ಸಲ್ಲುವ ಶುಭಮುಹೂರ್ತ ಸಿಂಹ ಲಗ್ನದಲ್ಲಿ ರಾಮಸ್ವಾಮಿ ವೃತ್ತದ ಸಮೀಪದಲ್ಲಿರುವ ಶ್ರೀ ಭಾಗವತಾಶ್ರಮದಲ್ಲಿ ನಿರ್ಮಿಸಿರುವ ಶ್ರೀ ವೆಂಕಟಾಚಲಧಾಮದ ಉದ್ಘಾಟನಾ ಸಮಾರಂಭ ಹಾಗೂ ಶ್ರೀ ಶ್ರೀನಿವಾಸ ದೇವರು ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ವೃಂದಾವನಾ ಪ್ರತಿಷ್ಠಾಪನಾ ಹಾಗೂ ಬ್ರಹ್ಮಕಲಶಾಭಿಷೇಕ ವನ್ನು ಜ್ಞಾನವೃದ್ಧತಪೋವೃದ್ಧ ಯತಿಗಳಿಂದ ನೆರವೇರಿಸುವುದಾಗಿ ನಿಶ್ಚಯಿಸಿರುತ್ತೇವೆ. ಆ ಪ್ರಯುಕ್ತ ನಡೆಯುವ ಎಲ್ಲಾ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಸಕ್ರಿಯರಾಗಿ ಭಾಗವಹಿಸಿ ಹರಿಗುರುಗಳ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

## ಕಾರ್ಯಕ್ರಮ

**ದಿನಾಂಕ 20-05-2011 ಶುಕ್ರವಾರ ಶ್ರೀ ವೇಂಕಟಾಚಲಧಾಮದ ಉದ್ಘಾಟನೆ**

**ದಿನಾಂಕ 23-05-2011 ಸೋಮವಾರ ಬೆಳಿಗ್ಗೆ 11-55 ಕ್ಕೆ ಸಿಂಹ ಲಗ್ನದಲ್ಲಿ**

**ಶ್ರೀ ಶ್ರೀನಿವಾಸದೇವರ ಹಾಗೂ ಶ್ರೀ ರಾಘವೇಂದ್ರಸ್ವಾಮಿಗಳ ವೃಂದಾವನಾ ಪ್ರತಿಷ್ಠಾ**

### ಶ್ರೀ ಶ್ರೀ ವಿದ್ಯೇಶತೀರ್ಥ ಶ್ರೀಪಾದರು

ಭಂಡಾರಕೇರಿಮಠ, ಉಡುಪಿ.

ಹಾಗೂ

### ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು

ಪೇಜಾವರ ಮಠ, ಉಡುಪಿ.

**ದಿನಾಂಕ 24-05-2011 ಮಂಗಳವಾರ**

### "ಪೂರ್ಣಕುಂಭಾಭಿಷೇಕ"

### ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

ಪೇಜಾವರ ಮಠ, ಉಡುಪಿ.

# ಪ್ರತಿಷ್ಠಾಪನಾಂಗ ನಡೆಯುವ ಕಾರ್ಯಕ್ರಮಗಳು

**18-05-2011 ಬುಧವಾರ**

| | | |
|---|---|---|
| ಸಂಜೆ 5-00 ಗಂಟೆಗೆ | : | ಶಿಲ್ಪಿ ಪುರಸ್ಕಾರ ಕಟ್ಟಡ ಸ್ವೀಕಾರ, ದೇವತಾ ಪ್ರಾರ್ಥನೆ ಉಗ್ರಾಣ ಮುಹೂರ್ತ ತೋರಣ ಮುಹೂರ್ತ |

**19-05-2011 ಗುರುವಾರ**

| | | |
|---|---|---|
| ಪ್ರಾತಃ 7-00 ಗಂಟೆಗೆ | : | ಪುಣ್ಯಾಹ, ನಾಂದೀಶ್ರಾದ್ಧ ಕೌತುಕಬಂಧನ, ಋತ್ವಿಗ್ವರಣೆ, ಅರಣಿಮಥನ, ದ್ವಾದಶ ನಾರಿಕೇಲಮಹಾಗಣಪತಿಯಾಗ, ಶ್ರೀ ಸೂಕ್ತ ಪುರುಷಸೂಕ್ತ ಹೋಮ. |
| ಸಂಜೆ 5-00 ಗಂಟೆಗೆ | : | ವಾಸ್ತು ಪೂಜಾ, ವಾಸ್ತು ಹೋಮ, ರಕ್ಷೋಘ್ನಹೋಮ, ಸುದರ್ಶನ ಹೋಮ, ಪ್ರಾಸಾದ ಶುದ್ಧಿ. |

**20-05-2011 ಶುಕ್ರವಾರ**

| | | |
|---|---|---|
| ಪ್ರಾತಃ 7-00 ಗಂಟೆಗೆ | : | ವಿಷ್ಣುಗಾಯತ್ರೀ ಮಂತ್ರಹೋಮ, ಭೂವರಾಹ ಮಂತ್ರಹೋಮ, ನವಗ್ರಹ ಹೋಮ. |
| ಸಂಜೆ 7-00 ಗಂಟೆಗೆ | : | ಅಗ್ನ್ಯುತ್ತಾರಣ, ಬಿಂಬಶುದ್ಧಿ, ಚಂಕ್ರಾಬ್ಜ ಮಂಡಲಪೂಜಾ, ಉದಕಶಾಂತಿ |
| ಸಂಜೆ 5-45 ರಿಂದ 6-30 | : | ವಿ॥ ಶ್ರೀ ಕೃಷ್ಣಕುಮಾರಾಚಾರ್ಯರಿಂದ ಧಾರ್ಮಿಕ ವಿಧಿ ವಿಧಾನಗಳ ಬಗ್ಗೆ ಉಪನ್ಯಾಸ |
| ಸಂಜೆ 6-30 ರಿಂದ 7-15 | : | ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರಿಂದ ಉಪನ್ಯಾಸ ಶ್ರೀರಾಮಚಾರಿತ್ರಮಂಜರೀ |
| ಸಂಜೆ 7-15 ರಿಂದ 8-30 | : | ಹರಿದಾಸರ ಪದಗಳು ಹಾಡುಗಾರಿಕೆ ವಿದ್ವಾನ್ ಶ್ರೀ ಶ್ರೀನಾಥ್ ಮತ್ತು ವೃಂದದವರಿಂದ |

**21-05-2011 ಶನಿವಾರ**

| | | |
|---|---|---|
| ಪ್ರಾತಃ 7-00 ಗಂಟೆಗೆ | : | ವಿಷ್ಣು ಗಾಯತ್ರೀಮಂತ್ರಹೋಮ, ಪವಮಾನ ಹೋಮ, ಕೂಷ್ಮಾಂಡಸೂಕ್ತ ಹೋಮ, ಅಷ್ಟಮಹಾಮಂತ್ರಹೋಮ |
| ಸಂಜೆ | : | ಅಂಕುರಾರ್ಪಣ, ಪುಷ್ಪಶಯ್ಯಾದಿವಾಸ |
| ಸಂಜೆ 5-45 ರಿಂದ 6-30 | : | ವಿ॥ ಶ್ರೀ ರವಿಕುಮಾರಾಚಾರ್ಯರವರಿಂದ ಧಾರ್ಮಿಕ ವಿಧಿ ವಿಧಾನಗಳ ಬಗ್ಗೆ ಉಪನ್ಯಾಸ |
| ಸಂಜೆ 6-30 ರಿಂದ 7-15 | : | ಶ್ರೀ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರಿಂದ ಉಪನ್ಯಾಸ ಶ್ರೀರಾಮಚಾರಿತ್ರಮಂಜರೀ |
| ಸಂಜೆ 7-15 ರಿಂದ 8-30 | : | ವಿದುಷಿ ಕೃಪಾಪಡ್ಕೆ ಮತ್ತು ಸಂಗಡಿಗರಿಂದ ಭರತನಾಟ್ಯ |

## 22-05-2011 ಭಾನುವಾರ

ಪ್ರಾತಃ 7-00 ಗಂಟೆಗೆ : ನಾರಾಯಣ ಅಷ್ಟಾಕ್ಷರ ಮಹಾಮಂತ್ರ ಹೋಮ. ಕೃಷ್ಣಮಂತ್ರ ಹೋಮ. ಪುರುಷಸೂಕ್ತ ಹೋಮ. ಬ್ರಹ್ಮಗಾಯತ್ರೀ ಮಂತ್ರಹೋಮ

ಸಂಜೆ 7-00 ಗಂಟೆಗೆ : ನ್ಯಾಸಾದಿಗಳು - ಉದಕಶಾಂತಿ

ಸಂಜೆ 5-45 ರಿಂದ 6-30 : ವಿ॥ ಶ್ರೀ ರಾಜಗೋಪಾಲ ಉಪಾಧ್ಯಾಯರವರಿಂದ ಧಾರ್ಮಿಕ ವಿಧಿ ವಿಧಾನಗಳ ಬಗ್ಗೆ ಉಪನ್ಯಾಸ

ಸಂಜೆ 6-30 ರಿಂದ 7-15 : ಶ್ರೀ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರಿಂದ ಉಪನ್ಯಾಸ ಶ್ರೀರಾಮಚಾರಿತ್ರಮಂಜರೀ

ಸಂಜೆ 7-15 ರಿಂದ 8-30 : ಶ್ರೀ ಭದ್ರಗಿರಿ ಅಚ್ಯುತದಾಸ್ ಅವರಿಂದ ಹರಿಕಥೆ ಶ್ರೀನಿವಾಸ ಕಲ್ಯಾಣ

## 23-05-2011 ಸೋಮವಾರ

ಪ್ರಾತಃ 7-00 ಗಂಟೆಗೆ : ತತ್ವ ಮಂತ್ರಹೋಮ, ಪ್ರತಿಷ್ಠಾಹೋಮ, ವಿರಜಾಮಂತ್ರ ಹೋಮ, ಶ್ರೀ ಶ್ರೀ ದೇವರ ಪ್ರತಿಷ್ಠೇ, ಮಹಾಮಂಗಳಾರತಿ

ಸಂಜೆ : ರಂಗಪೂಜಾ, ಮಂಡಲರಚನೆ

ಸಂಜೆ 5-45 ರಿಂದ 6-30 : ರಂಗಪೂಜೆ

ಸಂಜೆ 6-30 ರಿಂದ 7-15 : ಶ್ರೀ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರಿಂದ ಉಪನ್ಯಾಸ ಶ್ರೀರಾಮಚಾರಿತ್ರಮಂಜರೀ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರಿಂದ ಆಶೀರ್ವಚನ

ಸಂಜೆ 7-15 ರಿಂದ 8-30 : ಗಾನಕಲಾ ಸಿಂಧು ಶ್ರೀ ಬಿ. ಕೆ. ಪದ್ಮನಾಭರಾವ್‌ರವರ ಶಿಷ್ಯರಿಂದ ಕರ್ನಾಟಕ ಸಂಗೀತ

## 24-05-2011 ಮಂಗಳವಾರ

: ಪ್ರಾತಃ ಅಷ್ಟೋತ್ತರ ಶತಕಲಶಸ್ಥಾಪನೆ, ಅಧಿವಾಸಹೋಮ, ಶ್ರೀಕರಮಂತ್ರ ಹೋಮ, ಬ್ರಹ್ಮಕಲಶಾಭಿಷೇಕ, ಕರ್ಮಸಮರ್ಪಣೆ, ಮಹಾಮಂತ್ರಾಕ್ಷತೆ.

ಸಂಜೆ 5-00 ರಿಂದ 8-30 : ಸಭಾ ಕಾರ್ಯಕ್ರಮ

ಪ್ರತಿಷ್ಠಾ ಸಮಯ ದಿನಗಳಲ್ಲಿ ನಿತ್ಯದಲ್ಲಿಯೂ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಭಾಗವತ ಪುರಾಣ, ವೇಂಕಟೇಶ ಮಹಾತ್ಮೆ ಇತ್ಯಾದಿ ಪಾರಾಯಣ ನಡೆಯುವುದು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಕ್ತಾದಿಗಳ ಪೂರ್ಣ ಸಹಕಾರವನ್ನು ಕೋರಲಾಗಿದೆ.

ವ್ಯವಸ್ಥಾಪಕರು, ಭಂಡಾರಕೇರಿ ಮಠ, ಉಡುಪಿ
ಪ್ರತಿಷ್ಠಾಪನಾ ಮಹೋತ್ಸವ ಸೇವಾ ಸಮಿತಿ.

ಹೆಚ್ಚಿನ ವಿವರಗಳಿಗಾಗಿ ಕೆಳಕಂಡವರನ್ನು ಸಂಪರ್ಕಿಸಬಹುದು

| | | |
|---|---|---|
| ಭಾಗವತಾಶ್ರಮ ಪ್ರತಿಷ್ಠಾನ | : | 2420808 |
| ಎಸ್. ಎಸ್. ರವಿ | : | 9916281972, 2462996 |
| ವೆಂಕಟರಾವ್ | : | 2343118 |